ದಿನಾಂಕಃ **22-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎಸ್.ಎಸ್.ರವರಿಂದ ಃ

**1.** ನನ್ನ ತಂದೆ ವಾದಿ ಆರೋಗ್ಯದಿಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಇಬ್ಬರು ಗಂಡು ಮತ್ತು ಒಬ್ಬ ಹೆಣ್ಣು ಮಗಳು. ನನ್ನ ತಂದೆ ಮತ್ತು ಮಕ್ಕಳ ನಡುವೆ ವಿಭಾಗವಾಗಿಲ್ಲ. ನನ್ನ ತಾತ ಈರೇಗೌಡರಿಗೆ ಇಬ್ಬರು ಹೆಂಡತಿಯರು ಮೊದಲನೇ ಹೆಂಡತಿಗೆ 3 ಗಂಡು, 3 ಹೆಣ್ಣು ಮಕ್ಕಳು. 2 ನೇ ಹೆಂಡತಿಗೆ 5 ಗಂಡು ಮತ್ತು ಒಬ್ಬ ಹೆಣ್ಣು ಮಗಳು. ನನ್ನ ತಾತನ ಮೊದಲನೇ ಹೆಂಡತಿ ಕೆಂಪಮ್ಮನ ಮಕ್ಕಳ ಹೆಸರು ಹೆಚ್. ವೀರೇಗೌಡ, ಪುಟ್ಟೇಗೌಡ, ತಮ್ಮೇಗೌಡ, ಕೆಂಚಮ್ಮ, ಜಯಮ್ಮ, ಮತ್ತೊಬ್ಬರ ಹೆಸರು ಗೊತ್ತಿಲ್ಲ. ನನ್ನ ತಾತನ 2 ನೇ ಹೆಂಡತಿಯ ಹೆಸರು ಸಣ್ಣತಾಯಮ್ಮ ಉಃ ಚಿಕ್ಕತಾಯಮ್ಮ ಅವರ ಮಕ್ಕಳ ಹೆಸರು ಜವರೇಗೌಡ, ನಿಂಗೇಗೌಡ, ಪದ್ಮನಾಭ, ಕೃಷ್ಣೇಗೌಡ, ವೆಂಕಟರಾಮ, ಹೆಣ್ಣು ಮಗಳ ಹೆಸರು ನನಗೆ ಗೊತ್ತಿಲ್ಲ. ನನ್ನ ತಾತ 1960-61 ರ ಸಾಲಿನಲ್ಲಿ ತೀರಿಕೊಂಡಿರಬಹುದು. ನನ್ನ ತಂದೆಯ ಒಡಹುಟ್ಟಿದವರ ನಡುವೆ 1962 ನೇ ಸಾಲಿನಲ್ಲಿ ಪಂಚಾಯಿತಿ ಪಾಲುಪಾರಿಕತ್ತು ಆಗಿತ್ತು. ಪಾಲುಪಾರಿಕತ್ತಿನಂತೆ ಹೆಚ್.ವೀರೇಗೌಡರಿಗೆ ಸರ್ವೆ ನಂಃ186 ರಲ್ಲಿ 20 ಗುಂಟೆ, ಸರ್ವೆ ನಂಃ53/6(ಸಿ) ರಲ್ಲಿ ಒಂದು ನಿವೇಶನ-2 ಗುಂಟೆ ಬಂದಿದೆ. ಪಾಲುಪಾರಿಕತ್ತಿನಂತೆ ನನ್ನ ತಂದೆ ತಮ್ಮೇಗೌಡರಿಗೆ ಸರ್ವೆ ನಂಃ186 ರಲ್ಲಿ 20 ಗುಂಟೆ, ಸರ್ವೆ ನಂಃ53/6(ಬಿ) ರಲ್ಲಿ ಒಂದು ನಿವೇಶನ-2 ಗುಂಟೆ ಬಂದಿದೆ. ಪಾಲುಪಾರಿಕತ್ತಿನಂತೆ ಪಟ್ಟೇಗೌಡರಿಗೆ ಸರ್ವೆ ನಂಃ186 ರಲ್ಲಿ 20 ಗುಂಟೆ, ಸರ್ವೆ ನಂಃ53/6(ಡಿ) ರಲ್ಲಿ ಒಂದು ನಿವೇಶನ-2 ಗುಂಟೆ ಬಂದಿದೆ.

**2**. ಪಾಲುಪಾರಿಕತ್ತಿನಂತೆ ನನ್ನ ತಾತನ ಕಿರಿಯ ಹೆಂಡತಿಯ ಮಕ್ಕಳಿಗೆ ಸರ್ವೆ ನಂಃ186 ರಲ್ಲಿ ತಲಾ 10 ಗುಂಟೆ ಕೊಡಲಾಗಿದೆ. ಸರ್ವೆ ನಂಃ53/6(ಎ) ರಲ್ಲಿ 6 ಗುಂಟೆಯನ್ನು ಐದು ಜನ ಮಕ್ಕಳಿಗೆ ನಿವೇಶನವಾಗಿ ಕೊಡಲಾಗಿದೆ. ನನ್ನ ತಂದೆ ಮತ್ತು ನಾವು ಒಟ್ಟಾಗಿ ವಾಸವಾಗಿದ್ದೇವೆ. ನನ್ನ ದೊಡ್ಡಪ್ಪ ಹೆಚ್.ವೀರೇಗೌಡರು ಯಾವಾಗ ತೀರಿಕೊಂಡರು ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಸ್ವತ್ತುಗಳು ನನ್ನ ದೊಡ್ಡಮ್ಮನ ಲಕ್ಷ್ಮಮ್ಮನ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ನನ್ನ ದೊಡ್ಡಮ್ಮ ಸದರಿ ಸ್ವತ್ತುಗಳಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ನನ್ನ ದೊಡ್ಡಮ್ಮ ಮತ್ತು ಮಕ್ಕಳು ಸರ್ವೆ ನಂಃ53/6(ಸಿ)ರಲ್ಲಿನ 2 ಗುಂಟೆ ಸ್ವತ್ತನ್ನು ಪ್ರತಿವಾದಿ ಕೃಷ್ಣೇಗೌಡರಿಗೆ ದಿಃ27.03.2017 ರಲ್ಲಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ

ಕ್ರಯ ಪತ್ರದಂತೆ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಪ್ರತಿವಾದಿ ತನ್ನ ಕ್ರಯದ ಸ್ವತ್ತನ್ನು ತನ್ನ ಹೆಂಡತಿ ರತ್ನಮ್ಮನ ಹೆಸರಿಗೆ ಒಪ್ಪಿಗೆ ಪತ್ರದ ಮೂಲಕ ಖಾತೆ ಮಾಡಿಸಿದ್ದಾರೆ ಎಂದರೆ ಸರಿ. ರತ್ನಮ್ಮನ ಹೆಸರಿಗೆ ನಮೂನೆ-11(ಬಿ) ರಡಿಯಲ್ಲಿ ಪಂಚಾಯಿತಿಯಿಂದ ಖಾತೆಯಾಗಿದೆ ಎಂದರೆ ಇರಬಹುದು. ಸದರಿ ಸ್ವತ್ತಿನಲ್ಲಿ ಮನೆ ಕಟ್ಟಲು ರತ್ನಮ್ಮ ಪಂಚಾಯಿತಿಯಿಂದ ಪರವಾನಿಗೆ ಪಡೆದಿದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ರತ್ನಮ್ಮ ಮನೆ ಕಟ್ಟಿದ್ದಾಳೆ ಎಂದರೆ ಸರಿ. ಸಾಕ್ಷಿಯು ಮತ್ತೆ ಉತ್ತರಿಸುತ್ತ ರತ್ನಮ್ಮ ಸರ್ವೆ ನಂ:53/6(ಬಿ)ರಲ್ಲಿ ಮನೆ ಕಟ್ಟಿದ್ದಾಳೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಕ್ರಯಕ್ಕೆ ಪಡೆದುಕೊಂಡ ಸ್ವತ್ತಿನ ಚೆಕ್ಕುಬಂದಿಗೆ ಅನುಗುಣವಾಗಿ ರತ್ನಮ್ಮ ಮನೆ ಕಟ್ಟಿಸಿದ್ದಾಳೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತಿನ ಕ್ರಯ ಪತ್ರವನ್ನು ನಾನು ನೋಡಿಲ್ಲ. ಸಾಕ್ಷಿಗೆ ಪ್ರತಿವಾದಿಯು ಕೊಂಡುಕೊಂಡಿರುವ ಸ್ವತ್ತಿನ ಚೆಕ್ಕುಬಂದಿಯನ್ನು ಓದಿ ಹೇಳಲಾಗಿ ಸದರಿ ಚೆಕ್ಕುಬಂದಿಯೇ ತಪ್ಪು ಎಂದು ನುಡಿಯುತ್ತಾರೆ. ಕ್ರಯ ಪತ್ರದ ಚೆಕ್ಕುಬಂದಿ ಪೂ: ತಮ್ಮೇಗೌಡರ ಜಮೀನು, ಪ: ಧರ್ಮರಾಜುರವರ ಜಮೀನು, ಉ: ತಮ್ಮೇಗೌಡರ ಜಮೀನು, ದ: ಕೃಷ್ಣೇಗೌಡರಿಗೆ ಕ್ರಯ ಪತ್ರದ ದಿನ ಕೊಟ್ಟಿರುವ ಮತ್ತೊಂದು ಸರ್ವೆ ನಂ:53/6(ಎ)ರ 2 ½ ಗುಂಟೆ ಸ್ವತ್ತಿನ ಜಾಗದಲ್ಲಿ ರತ್ನಮ್ಮ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಪೂ: ತಮ್ಮೇಗೌಡರ ಜಮೀನು, ಪ: ಧರ್ಮರಾಜುರವರ ಜಮೀನು, ಉ: ತಮ್ಮೇಗೌಡರ ಜಮೀನು, ದ: ಕೃಷ್ಣೇಗೌಡರಿಗೆ ಕ್ರಯ ಪತ್ರದ ದಿನ ಕೊಟ್ಟಿರುವ ಮತ್ತೊಂದು ಸರ್ವೆ ನಂ:53/6(ಎ)ರ 2 ½ ಗುಂಟೆ ಸ್ವತ್ತಿನ ಜಾಗದಲ್ಲಿ ಯಾರು ಸ್ವಾದೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾವು ಮನೆ ಕಟ್ಟಿಲ್ಲ, ಹಾಗೇ ಸ್ವಾದೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ.

**3**. ಪಂಚಾಯಿತಿ ಪಾಲುಪಟ್ಟಿಯಲ್ಲಿ ನನ್ನ ತಂದೆಯ ಹಿಸ್ಸೆಗೆ ಬಂದಿರುವ ಸ್ವತ್ತಿನ ಚೆಕ್ಕುಬಂದಿಯನ್ನು ನಾನು ಸರಿಯಾಗಿ ನೋಡಿಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**